# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1459 |
| 2 | ಸದಸ್ಯರ ಹೆಸರು | : | ಶ್ರೀ ಹೆಚ್ ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| 3 | ಉತ್ತರಿಸುವ ದಿನಾಂಕ | : | 10-03-2022 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಪ್ರಶ್ನೆ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಗುಪ್ತವಾರ್ತೆ/ಗುಪ್ತಚರ (Intelligence) ನೇಮಕಾತಿಯಲ್ಲಿ ಅಭ್ಯರ್ಥಿಗಳಿಗೆ (Sub-Inspector) ಇರಬೇಕಾದ ದೈಹಿಕ ಎತ್ತರವೆಷ್ಟು; | ಪಿ.ಎಸ್.ಐ. (ರಾಜ್ಯಗುಪ್ತವಾರ್ತೆ) ಹುದ್ದೆಗೆ ಇರಬೇಕಾದ ದೈಹಿಕ ಎತ್ತರದ ವಿವರ ಈ ಕೆಳಗಿನಂತಿದೆ:-<br>1) ನೇರ ಮತ್ತು ಸೇವಾನಿರತ (ಪುರುಷ) ಅಭ್ಯರ್ಥಿಗಳಿಗೆ:-<br>ಎತ್ತರ: ಕನಿಷ್ಠ 168 ಸೆಂ.ಮೀ.<br>2) ನೇರ ಮತ್ತು ಸೇವಾನಿರತ (ಮಹಿಳಾ) ಅಭ್ಯರ್ಥಿಗಳಿಗೆ:-<br>ಎತ್ತರ: ಕನಿಷ್ಠ 157 ಸೆಂ.ಮೀ.<br>3) ಮಾಜಿ ಸೈನಿಕ ಅಭ್ಯರ್ಥಿಗಳಿಗೆ:-<br>ನಿಗಧಿಪಡಿಸಿರುವ ಕನಿಷ್ಠ ಎತ್ತರ 168 ಸೆಂ.ಮೀ ಹೊಂದಿರುವ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಿಲ್ಲದೆ ಇರುವ ಪಕ್ಷದಲ್ಲಿ ಕಡಿಮೆ ಎತ್ತರ ಹೊಂದಿರುವ ಮಾಜಿ ಸೈನಿಕ ಅಭ್ಯರ್ಥಿಗಳನ್ನು ಸಹ ಅರ್ಹತೆಗೆ ಅನುಗುಣವಾಗಿ ಅಂತಿಮ ಆಯ್ಕೆಗೆ ಪರಿಗಣಿಸಲಾಗುವುದು. |
| (ಆ) | ಇದು ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಗುಪ್ತಚರ (IB-Intelligence Bureau) ಇಲಾಖೆಯ ನೇಮಕಾತಿಯ ದೈಹಿಕ ಅಂಶಗಳಿಗೆ ಸಮನಾಗಿದೆಯೆ; ಇಲ್ಲವಾದಲ್ಲಿ ಕಾರಣಗಳೇನು; ಅದೇ ಅಂಶಗಳನ್ನು ಅಳವಡಿಸಿಕೊಳ್ಳಲು ಕೈಗೊಂಡ ಕ್ರಮಗಳೇನು? (ಈ ಸಂಬಂಧ ಸಂಪೂರ್ಣ ಮಾಹಿತಿಯನ್ನು ನೀಡುವುದು). | ಇದು ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಗುಪ್ತಚರ (IB-Intelligence Bureau) ಇಲಾಖೆಯ ನೇಮಕಾತಿಯ ದೈಹಿಕ ಅಂಶಗಳಿಗೆ ಸಮನಾಗಿರುವುದಿಲ್ಲ.<br>ಆದರೆ ರಾಜ್ಯ ಗುಪ್ತವಾರ್ತೆಯ ಪಿಎಸ್ಐ ಹುದ್ದೆಗಳ ಕರ್ತವ್ಯಗಳಿಗನುಸಾರ ರಾಜ್ಯ ಸರ್ಕಾರವು ವಿಶೇಷ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ದೈಹಿಕ ಮಾನದಂಡವನ್ನು ನಿಗಧಿಪಡಿಸಿರುತ್ತದೆ. ಅದರಂತೆ ನೇಮಕಾತಿಗಳನ್ನು ಪ್ರಸ್ತುತ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಒಇ 43 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು